**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:14**

**ಎಸ್.ಸಿ. ಸಂಖ್ಯೆ: 10/2019 ಸಿಡಬ್ಲ್ಯೂ:17**

**ಸಾಕ್ಷಿದಾರರ ಹೆಸರು** : ರವಿರಾಜ
**ತಂದೆ ಹೆಸರು** : ಶೀನ ನಾಯಕ್
**ವಯಸ್ಸು** : 46 ವರ್ಷ
**ವೃತ್ತಿ** : ಪತ್ರಿಕಾ ವರದಿಗಾರ
**ವಾಸ** : ಸೇನಾಪುರ, ಕುಂದಾಪುರ

**ದಿನಾಂಕ: 30-12-2021 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 11-03-2019 ರಂದು ಸರ್ಕಲ್ ಇನ್ಸಪೆಕ್ಟರ್ ಕಚೇರಿಗೆ ಬರಲು ಹೇಳಿದ್ದು ನಾನು ಬೆಳಿಗ್ಗೆ 9 ಗಂಟೆಗೆ ಅಲ್ಲಿಗೆ ಹೋಗಿರುತ್ತೇನೆ. ನನ್ನೊಂದಿಗೆ ಉದಯ ಆಚಾರ್ (ಚಾಸಾ-18) ಬಂದಿದ್ದರು. ನಾನು ಕಚೇರಿಗೆ ಹೋದಾಗ ಅಲ್ಲಿ ಆರೋಪಿ ಪೊಲೀಸರ ವಶದಲ್ಲಿ ಇದ್ದ. ಆಗ ನನ್ನ ಸಮಕ್ಷಮ ಪೊಲೀಸರು ಸ್ವಿಫ್ಟ್ ಡಿಸೈರ್ ಕಾರನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಅಲ್ಲಿ ಮಾಡಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಮಹಜರನ್ನು ನಿಪಿ-18 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಈಗ ನೋಡಿದ ಫೋಟೋದಲ್ಲಿ ಕಾಣುವ ಕಾರನ್ನು ಅಮಾನತುಪಡಿಸಿಕೊಂಡಿದ್ದು ಇದೆ. ಫೋಟೋವನ್ನು ನಿಪಿ-19 ಎಂದು ಗುರುತಿಸಲಾಯಿತು. ಮಹಜರಿಗೆ ಉದಯ ಆಚಾರ್ ಇವನು ಸಹಿ ಮಾಡಿರುತ್ತಾನೆ.

ನಂತರ ಆರೋಪಿಯೊಂದಿಗೆ ನಾವು, ಪೊಲೀಸರು ಕಟ್‌ಬೆಳ್ತೂರು ಹೋಗಿದ್ದು ಆರೋಪಿ ಕೃತ್ಯ ನಡೆದ ಸ್ಥಳದ ಕೋಣೆಯನ್ನು ತೋರಿಸಿರುತ್ತಾನೆ. ನಂತರ ತಾನು ವಾಸವಾಗಿರುವ ಮನೆಗೆ ಕರೆದುಕೊಂಡು ಹೋಗಿ ಕೃತ್ಯ ನಡೆದಾಗ ಧರಿಸಿದ್ದ ಬಟ್ಟೆಯನ್ನು ತೋರಿಸಿ ಹಾಜರುಪಡಿಸಿರುತ್ತಾನೆ. ಜೀನ್ಸ್ ಪ್ಯಾಂಟ್ ಮತ್ತು ನೀಲಿ ಶರ್ಟನ್ನು

ತೋರಿಸಿರುತ್ತಾನೆ. ಪೊಲೀಸರು ಅದನ್ನು ಮಹಜರು ಮಾಡಿ ವಶಪಡಿಸಿಕೊಂಡಿರುತ್ತಾರೆ. ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಮಹಜರನ್ನು ನಿಪಿ-20 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಅಮಾನತುಪಡಿಸಿಕೊಂಡ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. (ಪ್ಯಾಕೆಟ್‌ನಲ್ಲಿ ಸೀಲ್ ಮಾಡಿದ ವಸ್ತುಗಳನ್ನು ತೆಗೆದು ನೋಡಲಾಗಿ ಅದರಲ್ಲಿ ಪ್ಯಾಂಟ್ ಮತ್ತು ಶರ್ಟ ಇದ್ದು ಅವನ್ನು ಸಾಕ್ಷಿ ಗುರುತಿಸಿರುತ್ತಾರೆ.) ಪ್ಯಾಂಟ್ ಮತ್ತು ಶರ್ಟನ್ನು ಮು.ಮಾ-8 ಮತ್ತು 9 ಎಂದು ಗುರುತಿಸಲಾಯಿತು.

ನಂತರ ಆರೋಪಿ ಕುಂದಾಪುರ ಮಾರ್ಗವಾಗಿ ಜಾಲಾಡಿ ಗ್ರಾಮದ ಬ್ರಿಡ್ಜ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿಂದ ಕೆಳಗೆ ಹೋಗಿ ಅಲ್ಲಿ ಪೊದೆಯಲ್ಲಿ ಇದ್ದ ಶಾಲೊಂದನ್ನು ತೋರಿಸಿ ಅದನ್ನು ಕೃತ್ಯ ನಡೆದ ಸಮಯದಲ್ಲಿ ಉಪಯೋಗಿಸಿರುವುದಾಗಿ ಹೇಳಿರುತ್ತಾನೆ. ಅದನ್ನು ಪೊಲೀಸರು ಮಹಜರು ಮಾಡಿ ವಶಪಡಿಸಿಕೊಂಡಿರುತ್ತಾರೆ. ಮಹಜರನ್ನು ನಿಪಿ-21 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಶಾಲನ್ನು ನೋಡಿದರೆ ಗುರುತಿಸುತ್ತೇನೆ. (ಪ್ಯಾಕೆಟ್‌ನಲ್ಲಿ ಸೀಲ್ ಮಾಡಿದ ವಸ್ತುಗಳನ್ನು ತೆಗೆದು ನೋಡಲಾಗಿ ಅದರಲ್ಲಿ ಶಾಲ್ ಇದ್ದು ಅವನ್ನು ಸಾಕ್ಷಿ ಗುರುತಿಸಿರುತ್ತಾರೆ.) ಶಾಲನ್ನು ಮು.ಮಾ-10 ಎಂದು ಗುರುತಿಸಲಾಯಿತು.

ಮರುದಿನ ಪೊಲೀಸರು ಮತ್ತೆ ಪೊಲೀಸ್ ಠಾಣೆಗೆ ಕರೆಸಿದ್ದರು. ಅಲ್ಲಿಂದ ಆರೋಪಿ ಹೊಸಂಗಡಿ ಗ್ರಾಮಕ್ಕೆ ಕರೆದುಕೊಂಡು ಹೋಗಿ ಅವನ ಸ್ನೇಹಿತನನ್ನು ತೋರಿಸಿ ಅವನ ಹೆಸರು ರಂಜಿತ್ ಎಂದು ಹೇಳಿರುತ್ತಾನೆ. ಅಲ್ಲಿಂದ ಎಸ್‌ಸಿಡಿಸಿಸಿ ಬ್ಯಾಂಕ್‌ಗೆ ಕರೆದುಕೊಂಡು ಹೋಗಿದ್ದು ಅಲ್ಲಿ ನಾನು, ಪೊಲೀಸರು, ಆರೋಪಿ, ರಂಜಿತ್, ಉದಯ ಆಚಾರ್, ಅನಿತಾ ಇದ್ದರು. ಅನಿತಾ ಬ್ಯಾಂಕ್ ಮ್ಯಾನೇಜರ್ ಹತ್ತಿರ ಚಿನ್ನವನ್ನು ಕೊಡುವಂತೆ ಕೇಳಿದ್ದು ಮ್ಯಾನೇಜರ್ ಚಿನ್ನವನ್ನು ತೆಗೆದುಕೊಟ್ಟಿರುತ್ತಾರೆ. ಅದನ್ನು ಆರೋಪಿ ಈ ಚಿನ್ನವನ್ನು ತಾನು ಕೊಟ್ಟಿರುವುದಾಗಿ ಹೇಳಿರುತ್ತಾನೆ. ಈಗ ನೋಡಿದ ಚಿನ್ನದ ಸರ

(ಮು.ಮಾ-1) ಆ ದಿನ ಮ್ಯಾನೇಜರ್ ಹಾಜರುಪಡಿಸಿರುತ್ತಾರೆ. ಪೊಲೀಸರು ಮಹಜರು (ನಿಪಿ-6) ಮಾಡಿ ಅದನ್ನು ತೆಗೆದುಕೊಂಡಿರುತ್ತಾರೆ. ಮಹಜರಿಗೆ ನಾನು ಸಹಿ ಮಾಡಿದ್ದೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಡಿ) ಎಂದು ಗುರುತಿಸಲಾಯಿತು.

ಮರುದಿನ ಪೊಲೀಸರು ನನ್ನನ್ನು ಕರೆಸಿದ್ದು ಆರೋಪಿ ಎಲ್ಲರನ್ನು ಕರೆದುಕೊಂಡು ಬೆಂಗಳೂರಿನಲ್ಲಿಯ ಚಿನ್ನದ ಅಂಗಡಿಗೆ ಕರೆದುಕೊಂಡು ಹೋಗಿರುತ್ತಾನೆ. ಅಲ್ಲಿ ಆರೋಪಿಯ ಸ್ನೇಹಿತ ಸತೀಶ, ನಾನು, ಉದಯ ಆಚಾರ್, ಪೊಲೀಸರು, ಆರೋಪಿ ಇದ್ದೆವು. ಅಲ್ಲಿ ಸತೀಶ ಇವನು ಅಡ ಇಟ್ಟಿದ್ದ ಚಿನ್ನವನ್ನು ತೋರಿಸಿದ್ದು ಆರೋಪಿ ಅದನ್ನು ತಾನು ಕೊಟ್ಟಿದ್ದಾಗಿ ಹೇಳಿರುತ್ತಾನೆ. ಆ ಚಿನ್ನ ಕಿವಿಓಲೆ ಮತ್ತು ಉಂಗುರ (ಮು.ಮಾ-2, 3) ಇರುತ್ತದೆ. ಅದನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಪೊಲೀಸರು ಅವನ್ನು ವಶಪಡಿಸಿಕೊಂಡು ಮಹಜರು (ನಿಪಿ-12) ಮಾಡಿದ್ದು ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-12(ಸಿ) ಎಂದು ಗುರುತಿಸಲಾಯಿತು.

ದಿನಾಂಕ 19-03-2019 ರಂದು ಪೊಲೀಸರು ಪೊಲೀಸ್ ಠಾಣೆಗೆ ಕರೆಸಿದ್ದು ಅಲ್ಲಿ ಸತೀಶ ಇದ್ದನು. ಅಲ್ಲಿ ಸತೀಶ ಇವನು ಚಿನ್ನ ಅಡ ಇಟ್ಟ ರಸೀದಿಯನ್ನು ಹಾಜರುಪಡಿಸಿರುತ್ತಾನೆ. ಪೊಲೀಸರು ಅಲ್ಲಿ ಮಹಜರು (ನಿಪಿ-13) ಮಾಡಿ ರಸೀದಿಯನ್ನು (ನಿಪಿ-10) ವಶಪಡಿಸಿಕೊಂಡಿರುತ್ತಾರೆ. ಮಹಜರಿನಲ್ಲಿರುವ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಉದಯ ಆಚಾರ್ ಇದ್ದನು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದ**

ಎಂ.ಎಸ್.ಎಸ್. ವಕೀಲರ ಪರ ಎಂ.ಆರ್.ಕೆ.ಟಿ. ವಕೀಲರು ಸಮಯ ಕೋರಿದ್ದು ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಯಿತು.

**ಎಸ್.ಸಿ. ಸಂಖ್ಯೆ: 10/2019**
**ಪಿಡಬ್ಲ್ಯೂ:14**
**ಸಿಡಬ್ಲ್ಯೂ:17**

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.
ಕುಂದಾಪುರ

**ಎಸ್.ಸಿ. ಸಂಖ್ಯೆಃ 10/2019**
**ಪಿಡಬ್ಲ್ಯೂಃ14**
**ಸಿಡಬ್ಲ್ಯೂಃ17**

**ದಿನಾಂಕಃ 16-03-2021 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದ**

ನನ್ನ ಊರು ಕುಂದಾಪುರದಿಂದ 20 ಕಿಮೀ. ದೂರ ಇದೆ. ದಿನಾಂಕ 11-03-2019 ರಂದು ಸರ್ಕಲ್ ಇನ್ಸಪೆಕ್ಟರ್ ಬೆಳಿಗ್ಗೆ 7.30 ರ ಸುಮಾರಿಗೆ ಫೋನ್ ಮಾಡಿ ಕಚೇರಿಗೆ ಬರುವಂತೆ ಹೇಳಿದ್ದರು. ಮೃತ ಗುಲಾಬಿ ಇವಳ ತಮ್ಮ ನನ್ನ ಸ್ನೇಹಿತ ಇರುತ್ತಾನೆ. ಹೀಗಾಗಿ ನನಗೆ ಠಾಣೆಗೆ ಬರಲು ಹೇಳಿದ್ದರು. ನಾನು ಪೊಲೀಸ್ ಠಾಣೆಗೆ ಹೋಗುವುದರೊಳಗಾಗಿ ಠಾಣೆಯಲ್ಲಿದ್ದ ಆರೋಪಿಯ ಹೇಳಿಕೆಯನ್ನು ಬರೆದುಕೊಂಡಿದ್ದರು. ಅದನ್ನು ಯಾರು ಬರೆದುಕೊಂಡಿದ್ದಾರೆ ಮತ್ತು ಬರೆಯುವುದಕ್ಕೆ ಯಾರು ಮಾಹಿತಿ ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಪೊಲೀಸ್ ಠಾಣೆಯಲ್ಲಿರುವಾಗ ಯಾವುದೇ ದಾಖಲೆಗೆ ಸಹಿ ಮಾಡಿಲ್ಲ.

ನಾವು ಕಟ್‌ಬೆಳ್ತೂರು ಗ್ರಾಮಕ್ಕೆ ಹೋದಾಗ ಮನೆಯಲ್ಲಿ ಯಾರೂ ಇರಲಿಲ್ಲ. ಮನೆಯ ಬಾಗಿಲನ್ನು ಪೊಲೀಸರು ತೆಗೆದಿರುತ್ತಾರೆ. ಈ ಮನೆಯಲ್ಲಿ ಅಡುಗೆ ಮನೆ, ಊಟದ ಮನೆ, ಹಾಲ್ ಇತ್ತು. ಇದು ಸಿಮೆಂಟ್‌ನಿಂದ ಮಾಡಿದ ಮನೆಯಾಗಿತ್ತು. ನಾವು ಹೋದಾಗ ಅಲ್ಲಿ ಯಾವುದೇ ರಕ್ತದ ಗುರುತುಗಳು ಕಂಡು ಬರಲಿಲ್ಲ. ಈ ಮನೆಯ ಸಮೀಪದಲ್ಲಿ ಯಾವುದೇ ಮನೆ ಇಲ್ಲ. ಆದರೆ 100 – 200 ಮೀ. ದೂರದಲ್ಲಿ ಮನೆ ಇತ್ತು. ಅದು ಗೋಡಂಬಿ ಫ್ಯಾಕ್ಟರಿಯವರ ಮನೆ ಇರುತ್ತದೆ. ಈ ಮನೆಯಲ್ಲಿ ಆರೋಪಿಯ ಹೆಂಡತಿ ವಾಸವಾಗಿದ್ದಳು. ಆರೋಪಿ ವಾಸವಾಗಿದ್ದ ಮನೆಯಲ್ಲಿ ಯಾವುದೇ ಮಹಜರು ಮಾಡಿರುವುದಿಲ್ಲ, ಆದರೆ 2 ಬಟ್ಟೆಗಳನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ.

ಮೃತಳ ಮನೆಯಿಂದ ಸುಮಾರು ಒಂದೂವರೆ ಕಿಮೀ.ನಲ್ಲಿ ಜಾಲಾಡಿ ಗ್ರಾಮದ ಬ್ರಿಡ್ಜ್ ಬರುತ್ತದೆ. ಈ ಬ್ರಿಡ್ಜ್ ಹತ್ತಿರ ಮನೆಗಳು ಇರುವುದಿಲ್ಲ. ಬ್ರಿಡ್ಜ್ ಹತ್ತಿರ ಪೊಲೀಸರು ಫೊಟೋಗಳನ್ನು ತೆಗೆದಿರುತ್ತಾರೆ. ಅಲ್ಲಿ ಮಹಜರನ್ನು ತಯಾರಿಸಿದ್ದು ಆರೋಪಿಯ

ಮಾಹಿತಿಯಂತೆ ಬರೆಯಲಾಗಿದೆ. ಅಲ್ಲಿ ವಶಪಡಿಸಿಕೊಂಡ ವಸ್ತುಗಳಿಗೆ ಸಂಬಂಧಿಸಿದಂತೆ ನನ್ನ ಸಹಿಯನ್ನು ಪಡೆದುಕೊಳ್ಳಲಾಗಿದೆ. ಮಹಜರನ್ನು ಕೈಯಿಂದ ಬರೆಯಲಾಗಿದೆ, ಅದನ್ನು ಯಾರು ಬರೆದಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಮಹಜರು ಬರೆದಾಗ ಮಧ್ಯಾಹ್ನ 12 ಗಂಟೆ ಆಗಿತ್ತು. ಈ ಮಹಜರು ಮುಗಿದ ನಂತರ ಮರುದಿನ ಠಾಣೆಗೆ ಬರುವಂತೆ ಪೊಲೀಸರು ನನಗೆ ತಿಳಿಸಿದ್ದರು. ಆ ಪ್ರಕಾರ ನಾನು ಬೆಳಿಗ್ಗೆ 9.30 ರ ಸುಮಾರಿಗೆ ಠಾಣೆಗೆ ಹೋಗಿರುತ್ತೇನೆ. ಅಲ್ಲಿಂದ ಪೊಲೀಸರು, ನಾನು, ಉದಯ, ಆರೋಪಿ, ಅವನ ಗೆಳೆಯ ರಂಜಿತ್ ಹೋಗಿರುತ್ತೇವೆ. ನಾನು ಪೊಲೀಸ್ ಠಾಣೆಗೆ ಹೋಗುವುದಕ್ಕಿಂತ ಮೊದಲು ಇವರೆಲ್ಲರೂ ಠಾಣೆಯಲ್ಲಿದ್ದರು. ಆ ದಿನ ಪೊಲೀಸ್ ಠಾಣೆಯಲ್ಲಿ ನನ್ನ ಮತ್ತು ಆರೋಪಿಯ ನಡುವೆ ಮಾತುಕತೆ ನಡೆದಿಲ್ಲ. ಸಾಕ್ಷಿ ಮುಂದುವರಿದು ಆರೋಪಿ ತಾನು ಚಿನ್ನವನ್ನು ಎಲ್ಲಿ ಇಟ್ಟಿದ್ದೇನೆ ಎಂದು ತೋರಿಸುವುದಾಗಿ ಹೇಳಿದ್ದಾನೆ. ಆರೋಪಿ ಈ ರೀತಿ ಹೇಳಿದ್ದರ ಕುರಿತು ಠಾಣೆಯಲ್ಲಿ ಯಾವುದೇ ದಾಖಲೆಯನ್ನು ಮಾಡಲಾಗಿಲ್ಲ.

ಪೊಲೀಸ್ ಠಾಣೆಯಿಂದ ನಾವು ಹೊಸಂಗಡಿಯಲ್ಲಿರುವ ರಂಜಿತ್ ಈತನ ಮನೆಗೆ ಹೋಗಿರುತ್ತೇವೆ. ಅಲ್ಲಿಂದ ನಾನು, ರಂಜಿತ್, ಪೊಲೀಸರು, ಆರೋಪಿ ಸೇರಿ ಸಿದ್ದಾಪುರದ ಎಸ್‌ಸಿಡಿಸಿಸಿ ಬ್ಯಾಂಕ್‌ಗೆ ಹೋಗಿರುತ್ತೇವೆ. ಬ್ಯಾಂಕ್‌ಗೆ ಹೋದಾಗ ಆರೋಪಿ ಮತ್ತು ಬ್ಯಾಂಕ್ ಮ್ಯಾನೇಜರ್ ನಡುವೆ ಮಾತುಕತೆ ನಡೆದಿಲ್ಲ. ಮ್ಯಾನೇಜರ್ ಅಲ್ಲಿ ಕೊಟ್ಟ ಸರ ಚಿನ್ನದ ಸರ ಹೌದೋ ಅಲ್ಲವೋ ಎಂದು ಪರೀಕ್ಷೆ ಮಾಡಿರುವುದಿಲ್ಲ. ಅದು ಎಷ್ಟು ತೂಕದ ಸರ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಸರ್ಕಲ್ ಇನ್ಸಪೆಕ್ಟರ್ ಹೇಳಿದ್ದರಿಂದ ಮ್ಯಾನೇಜರ್ ಸರವನ್ನು ಕೊಟ್ಟಿರುತ್ತಾರೆ. ಬ್ಯಾಂಕ್‌ನಲ್ಲಿ ಮಹಜರು ಮಾಡಿರುತ್ತಾರೆ. ಮಹಜರಿಗೆ ನಾನು ಮತ್ತು ಉದಯ ಸಹಿ ಮಾಡಿರುತ್ತೇವೆ. ಬೇರೆಯವರು ಸಹಿ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ಮಹಜರನ್ನು ಆರೋಪಿಯ ಹೇಳಿಕೆಯಂತೆ ಬರೆಯಲಾಗಿದೆ. ಬ್ಯಾಂಕ್‌ನಲ್ಲಿ ಸುಮಾರು 2 ತಾಸುಗಳವರೆಗೆ ಇದ್ದೆವು. ಅಲ್ಲಿಂದ 2 ಗಂಟೆಯ ಸುಮಾರಿಗೆ ಪೊಲೀಸ್ ಠಾಣೆಗೆ ಬಂದಿರುತ್ತೇವೆ. ಸಿದ್ದಾಪುರದಿಂದ ಕುಂದಾಪುರ

ಸುಮಾರು 30 ಕಿಮೀ. ದೂರ ಇರಬಹುದು. ಸುಮಾರು 1 ತಾಸಿನ ಪ್ರಯಾಣ. ನಾನು ಮೃತ ಗುಲಾಬಿ ಇವಳು ವಾಸವಾಗಿದ್ದ ಮನೆಗೆ, ಆರೋಪಿ ವಾಸವಾಗಿದ್ದ ಮನೆಗೆ, ಜಾಲಾಡಿ ಗ್ರಾಮದ ಬ್ರಿಡ್ಜ್ ಹತ್ತಿರ, ಸಿದ್ದಾಪುರದ ಎಸ್‌ಸಿಡಿಸಿಸಿ ಬ್ಯಾಂಕ್ ಹತ್ತಿರ ಹೋಗಿಲ್ಲ, ನನ್ನ ಸಮಕ್ಷಮ ಅಲ್ಲಿ ಯಾವ ಮಹಜರನ್ನು ಮಾಡಿಲ್ಲ ಹಾಗೂ ಯಾವ ವಸ್ತುವನ್ನೂ ಪೊಲೀಸರು ಅಮಾನತುಪಡಿಸಿಕೊಂಡಿಲ್ಲ ಎಂದು ಸೂಚಿಸುವುದು ಸರಿ ಅಲ್ಲ. ಪೊಲೀಸರು ಮರುದಿನವೂ ಮತ್ತೆ ಬರುವಂತೆ ಹೇಳಿದ್ದರಿಂದ ನಾನು ಮರುದಿನ 8.30 ರ ಸುಮಾರಿಗೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಆ ದಿನ ದಿನಾಂಕ 13-03-2019 ಇತ್ತು. ಪೊಲೀಸರು ಬೆಂಗಳೂರಿಗೆ ಹೋಗಬೇಕಾಗುತ್ತದೆ ಎಂದು ಮೊದಲೇ ತಿಳಿಸಿದ್ದರು. ನಾವು ಪೊಲೀಸ್ ಠಾಣೆಯಿಂದ ಪೊಲೀಸ್ ಜೀಪ್‌ನಲ್ಲಿ ಹೋಗಿರುತ್ತೇವೆ. ನನ್ನೊಂದಿಗೆ ಉದಯ ಇವನೂ ಬಂದಿದ್ದನು. ಈ ಕೇಸ್‌ನಲ್ಲಿ ನಾನು ಆಸಕ್ತಿ ಹೊಂದಿದ್ದೇನೆ. ಪೊಲೀಸ್ ಠಾಣೆಗೆ ಹೋದ ಮೇಲೆ ಅಲ್ಲಿ ಯಾವುದೇ ದಾಖಲೆಯನ್ನು ತಯಾರಿಸಿರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋದ ಕೂಡಲೇ ಅಲ್ಲಿಂದ ಬೆಂಗಳೂರು ಕಡೆ ಹೊರಟಿರುತ್ತೇವೆ. ಕುಂದಾಪುರದಿಂದ ಬೆಂಗಳೂರಿಗೆ 10 ತಾಸಿನ ಪ್ರಯಾಣ ಎನ್ನುವುದು ನಿಜ. ನಾವು ಬೆಂಗಳೂರು ತಲುಪಿದಾಗ ಇನ್ನೂ ಕತ್ತಲಾಗಿರಲಿಲ್ಲ. ಬೆಂಗಳೂರಿನಲ್ಲಿ ನಾವು ವಾಸ್ತವ್ಯ ಮಾಡಿರುವುದಿಲ್ಲ.

ಬೆಂಗಳೂರಿನಲ್ಲಿ ಚಿನ್ನಾಭರಣ ಅಂಗಡಿಗೆ ಹೋದ ನಂತರ ಸತೀಶ (ಪಿಡಬ್ಲ್ಯೂ-9) ಇವನನ್ನು ಅಲ್ಲಿಗೆ ಪೊಲೀಸರು ಕರೆಸಿರುತ್ತಾರೆ. ನಾವು ಅಂಗಡಿಗೆ ಹೋದ ಅರ್ಧ ತಾಸಿನಲ್ಲಿ ಸತೀಶ ಅಲ್ಲಿಗೆ ಬಂದಿರುತ್ತಾನೆ. ಚಿನ್ನಾಭರಣ ಅಂಗಡಿಯಲ್ಲಿ ಒಂದು ಜೊತೆ ಕಿವಿಯೋಲೆ ಹಾಗೂ ಒಂದು ಉಂಗುರವನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿರುತ್ತಾರೆ. ಇವುಗಳನ್ನು ಕೊಡುವಂತೆ ಸರ್ಕಲ್ ಇನ್ಸಪೆಕ್ಟರ್ ಅಂಗಡಿಯವರಿಗೆ ಹೇಳಿದ್ದರು. ಅಲ್ಲಿ ಅಂಗಡಿಯವನು ಕೊಟ್ಟ ವಸ್ತು ಚಿನ್ನದ ವಸ್ತು ಹೌದೋ ಅಲ್ಲವೋ, ಅದು ಎಷ್ಟು ತೂಕ ಇದೆ ಎಂದು ಪರೀಕ್ಷಿಸಿರುವುದಿಲ್ಲ. ಪೊಲೀಸರು ಚಿನ್ನದ ವಸ್ತುಗಳನ್ನು ಪ್ಯಾಕ್ ಮಾಡಿ ಸೀಲ್ ಮಾಡಿರುತ್ತಾರೆ ಹಾಗೂ ಆ ಸೀಲ್‌ಗೆ ನನ್ನ ಸಹಿಯ ಚೀಟಿಯನ್ನು ಅಂಟಿಸಿರುತ್ತಾರೆ. ನಾವು

**ಎಸ್.ಸಿ. ಸಂಖ್ಯೆ: 10/2019**
**ಪಿಡಬ್ಲ್ಯು:14**
**ಸಿಡಬ್ಲ್ಯು:17**

ಚಿನ್ನದ ಅಂಗಡಿಯಲ್ಲಿ ಒಂದೂವರೆಯಿಂದ 2 ತಾಸಿನವರೆಗೆ ಇದ್ದೆವು. ನಾವು ಚಿನ್ನಾಭರಣ ಅಂಗಡಿಯಿಂದ ಹೊರಟಾಗ ರಾತ್ರಿ 9.30 ಗಂಟೆಯಾಗಿತ್ತು. ಮಹಜರು ಬರೆದಾಗ 9 ಗಂಟೆಯಾಗಿರಬಹುದು. ಮಹಜರಿಗೆ ನಾನು, ಉದಯ ಹಾಗೂ ಅಂಗಡಿಯವರು ಸಹಿ ಮಾಡಿರುತ್ತೇವೆ. ಸತೀಶ ಇವನಿಗೆ ಎಷ್ಟು ವರ್ಷ ವಯಸ್ಸಾಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಆ ದಿನ ನಾನು ಬೆಂಗಳೂರಿನಲ್ಲಿಯೇ ಉಳಿದುಕೊಂಡು ಮರುದಿನ ಬಂದಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿದಂತೆ ನಾನು 3 – 4 ಬಾರಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಪೊಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡಿರುವುದಿಲ್ಲ.

ಬೆಂಗಳೂರಿನಲ್ಲಿ ತಯಾರಿಸಿದ ಮಹಜರು ಕೈಬರಹದ್ದೋ ಅಥವಾ ಟೈಪ್ ಮಾಡಲಾಗಿತ್ತೋ ನನಗೆ ನೆನಪಿಲ್ಲ. ದಿನಾಂಕ 19-03-2019 ರಂದು ತಯಾರಿಸಲಾದ ಮಹಜರಿಗೆ (ನಿಪಿ-13) ಉದಯ್ ಇವನು ಸಹಿ ಮಾಡಿದ್ದಾನೆ. ಆ ಸಮಯದಲ್ಲಿ ರಸೀದಿಯನ್ನು (ನಿಪಿ-10) ವಶಪಡಿಸಿಕೊಂಡಿರುತ್ತಾರೆ. ಆ ರಸೀದಿಯಲ್ಲಿ ಏನನ್ನು ಬರೆಯಲಾಗಿತ್ತು ಎಂದು ನಾನು ನೋಡಿಲ್ಲ. ದಿನಾಂಕ 19-03-2019 ರಂದು ಯಾವ ಸಮಯದಲ್ಲಿ ಮಹಜರು ಮಾಡಲಾಗಿದೆ ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ಆರೋಪಿ ಇದ್ದನೋ ಅಥವಾ ಇಲ್ಲವೋ ನಾನು ನೋಡಿಲ್ಲ. ನಾನು ಆರೋಪಿ ಮತ್ತು ಪೊಲೀಸರೊಂದಿಗೆ ಬೆಂಗಳೂರಿಗೆ ಹೋಗಿಲ್ಲ, ಅಲ್ಲಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿಲ್ಲ, ಮಹಜರು ತಯಾರಿಸಿಲ್ಲ, ನಾನು ಆ ಮಹಜರಿಗೆ ಸಹಿ ಮಾಡಿಲ್ಲ, ಅದೇ ರೀತಿ ಪೊಲೀಸ್ ಠಾಣೆಗೆ ಹೋಗಿಲ್ಲ, ನನ್ನ ಸಮಕ್ಷಮ ಮಹಜರು ಮಾಡಿಲ್ಲ ಎಂದು ಹೇಳುವುದು ಸರಿ ಅಲ್ಲ. ಪೊಲೀಸರು ತೋರಿಸಿದ ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದು ಹೇಳುವುದು ಸರಿ ಅಲ್ಲ. ಮಹಜರಿನಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ಗೊತ್ತಿದೆ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.**
**ಕುಂದಾಪುರ**